# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ 20, ಗಂಗಾನಗರ, ಬೆಂಗಳೂರು**

ದಿನಾಂಕ: 27/10/2021

ಸಂಖ್ಯೆ:ಸ.ಅ/ವಾ-20/ಪಿ.ಆರ್./20/2020-21

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ: ಐ12(5)ಪಿ.ಆರ್./35/2021 ದಿನಾಂಕ 05/12/2020 ರವರ ಆದೇಶದಂತೆ ದಿನಾಂಕ 26/10/2021 ರಂದು ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ನಂ.20, ಗಂಗಾನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

### ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ. | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ. ಬಿ.ಎಸ್. ಪ್ರಹಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ರಾಮ್‌ರಾವ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ನಂ.20 |
| 3 | ಶ್ರೀಮತಿ ಶಾಹಿದ ಬೇಗಂ | ಎಸ್.ಹೆಚ್.ಐ. |
| 4 | ಶ್ರೀ. ಜೀವನ್ ಗೌಡ | ಜೆ.ಹೆಚ್.ಐ. |
| 5 | ಶ್ರೀಮತಿ ಸುವರ್ಣದೇವಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ. ವರ್ಕ್ ಇನ್ಸ್‌ಪೆಕ್ಟರ್ |
| 6 | ಶ್ರೀ. ಶಶಿಪ್ರಸಾದ್ | ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಟ್ರಾಫಿಕ್ |
| 7 | ಶ್ರೀಮತಿ ಶಾಲಿನಿ ದೇಶ್‌ಪಾಂಡೆ | ಅಸೋಸಿಯೇಷನ್ ಪ್ರೆಸಿಡೆಂಟ್, ಹೆಚ್.ಎಂ.ಟಿ. ಲೇಔಟ್ |
| 8 | ಶ್ರೀ. ಎಲ್ ಶ್ರೀನಿವಾಸ್ | ಸಾರ್ವಜನಿಕರು |
| 9 | ಶ್ರೀ. ಶ್ರೀನಿವಾಸ್ | ಸಾರ್ವಜನಿಕರು |
| 10 | ಶ್ರೀ. ಎಂ.ಆರ್. ಪ್ರಸಾದ್ | ಸಾರ್ವಜನಿಕರು |
| 11 | ಶ್ರೀ. ಬಸವರಾಜ್ | ಸಾರ್ವಜನಿಕರು |
| 12 | ಶ್ರೀ. ಎಂ.ವಿ. ಬಾಲು ಗೌಡ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ಬಿ.ಎಸ್. ಪ್ರಹಲಾದ್ ಮತ್ತು ಕಾರ್ಯದರ್ಶಿಗಳಾದ ಶ್ರೀ. ರಾಮ್‌ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ.20 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಕರಿಗೆ ತಿಳಿಯಪಡಿಸಿದರು.

- ವಾರ್ಡಿನಲ್ಲಿ ಮರದ ರೆಂಬೆಗಳನ್ನು ಸ್ವಚ್ಛವಾಗಿ ತೆಗೆಯುವುದರ ಕುರಿತು ಚರ್ಚೆ ಮಾಡಿದರು.

- ಪಿಳ್ಳಪ್ಪ ಬ್ಲಾಕ್ ಎಲ್ಲಾ ಕ್ರಾಸ್‌ನ ಚೇಂಬರ್‌ಗಳಲ್ಲಿ ಮಣ್ಣು ತುಂಬಿಕೊಂಡಿರುವುದನ್ನು ಸ್ವಚ್ಚಗೊಳಿಸುವ ಕುರಿತು ತಿಳಿಸಿದರು.
- ಸಿಬಿಐ ಮುಖ್ಯ ರಸ್ತೆಯ ಮೋರ್ ಅಂಗಡಿಯ ಪಕ್ಕದಲ್ಲಿ ದೊಡ್ಡದಾಗಿರುವ ಹಂಪ್ಸ್ ಹಾಕಿರುವುದರಿಂದ ಬೈಕ್‌ಗಳಿಗೆ ತೊಂದರೆಯಾಗುತ್ತಿದ್ದು, ಮತ್ತು ಆಂಬುಲೆನ್ಸ್‌ಗಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಅದನ್ನು ಸರಿಪಡಿಸುವ ವಿಷಯ ಕುರಿತು ಚರ್ಚೆ ಮಾಡಿದರು.
- ಪಾಪಣ್ಣ ಬ್ಲಾಕ್ 7ನೇ ಕ್ರಾಸ್ ಮತ್ತು 4ನೇ ಕ್ರಾಸ್‌ನಲ್ಲಿ ಸ್ಲಾಬ್‌ಗಳನ್ನು ಹಾಕಿಕೊಡುವುದರ ಬಗ್ಗೆ ತಿಳಿಯಪಡಿಸಿದರು.
- ಏರ್‌ಟೇಲ್ ಕೇಬ್‌ನವರು ಹಗೆದುಬಿಟ್ಟಿರುವ ಗುಂಡಿಗಳನ್ನು ತಕ್ಷಣ ಮುಚ್ಚಿಸುವುದರ ಕುರಿತು ಚರ್ಚೆ ಮಾಡಿದರು.
- ಯೆಲ್ಲಮ್ಮ ದೇವಸ್ಥಾನದ 1ನೇ ಮುಖ್ಯ ರಸ್ತೆ, 1ನೇ ಕ್ರಾಸ್, ಮನೆ ನಂ.53ಯಲ್ಲಿ ಇರುವ ತುಂಬ ಬೆಕ್ಕುಗಳಿಂದ ಅಕ್ಕಪಕ್ಕದವರಿಗೆ ತೊಂದರೆಯಾಗುತ್ತಿದ್ದು ಅವುಗಳನ್ನು ಸೆರೆಹಿಡಿದು ಬೇರೆ ಸ್ಥಳಕ್ಕೆ ವರ್ಗಯಿಸುವುದರ ಕುರಿತು ತಿಳಿಯಪಡಿಸಿದರು.
- ಗಂಗಾನಗರ, 5ನೇ ಮುಖ್ಯ ರಸ್ತೆಯಲ್ಲಿ ಮನೆಯ ಮಾಳಿಗೆಯ ನೀರು ನೇರವಾಗಿ ರಸ್ತೆಗೆ ಬಂದು ಬೀಳುವುದರಿಂದ ರಸ್ತೆಯ ಮೇಲೆ ಓಡಾಡುವ ಸಾರ್ವಜನರಿಗೆ ತೊಂದರೆಯಾಗುತ್ತಿರುವುದರಿಂದ ತಕ್ಷಣ ಆ ಮಾಳಿಗೆಯಿಂದ ಬರುವ ನೀರನ್ನು ತಡೆಯಬೇಕು.
- ಟ್ರಾಫಿಕ್ ಪೊಲೀಸರ ಜೊತೆ ಸಂಚಾರಿ ನಿಯಮಗಳ ಕುರಿತು ಮತ್ತು ಪಾರ್ಕಿಂಗ್ ಮತ್ತು ಫೈನ್ ಹಾಕುವುದರ ಬಗ್ಗೆ ಸವಿವರವಾಗಿ ಚರ್ಚೆ ಮಾಡಿದರು.
- ಮಾಸ್ಕ್‌ಗಳು ಕಡ್ಡಾಯವಾಗಿ ಧರಿಸಬೇಕು ಎಂದು ತಿಳಿಯಪಡಿಸಿದರು.

**ಕಾರ್ಯದರ್ಶಿಗಳು**
**ಹಾಗೂ ಸಹಾಯಕ ಅಭಿಯಂತರರು**
ವಾರ್ಡ್ ನಂ.20

**ಅಧ್ಯಕ್ಷರು**
**ಹಾಗೂ ನೋಡಲ್ ಅಧಿಕಾರಿಗಳು**
ವಾರ್ಡ್ ನಂ.20

ಪ್ರತಿಯನ್ನು:

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು(ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
9. ಸಹಾಯಕ ಅಭಿಯಂತರರು (ವಿದ್ಯುತ್/ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10. ಕಛೇರಿ ಕಡತಕ್ಕೆ.